ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.715/2021 CW-24 PW-9

| | | |
|---|---|---|
| ಹೆಸರು | : | ರಸೂಲಖಾನ್ |
| ತಂದೆಯ/ಗಂಡನ ಹೆಸರು | : | ಶಮ್‌ಶೀರಖಾನ್ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಎಎಸ್‌ಐ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 06-03-2024

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ

ದಿಃ 12-06-2020 ರಿಂದ 31-07-2022 ರವರೆಗೆ ಸಿಂಧನೂರು ನಗರ ಪೋ. ಠಾಣೆಯಲ್ಲಿ ಎ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 15-10-2020 ರಂದು ಮಾನವಿಯಲ್ಲಿರುವ ಗುನ್ಹೆ ಜಾಗದ ಪಂಚನಾಮೆ ಮಾಡಿಕೊಂಡು ಬರುವಂತೆ ಚಾಸಾ-25 ರವರ ಆದೇಶದಂತೆ ದಿಃ 15-10-2020 ರಂದು ಬೆಳಿಗ್ಗೆ 11-30 ರಿಂದ 12-30 ರ ಅವಧಿಯಲ್ಲಿ ಚಾಸಾ-1 ರವರು ತೋರಿಸಿದಂತೆ ಪಂಚರಾದ ಚಾಸಾ-15 ಮತ್ತು 16 ರವರ ಸಮಕ್ಷಮ ನಿಪಿ-5 ರಂತೆ ಪಂಚನಾಮೆ ಜರುಗಿಸಿದ್ದೇನೆ. ಸಾಕ್ಷಿಯು ನಿಪಿ-5 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ತಮ್ಮ ಮತ್ತು ಚಾಸಾ-15 ರವರ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-5 ಸಿ ಮತ್ತು 5 ಡಿ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿ, ಅಲ್ಲಿ ಪೋಟೋಗಳನ್ನು ತೆಗೆದುಕೊಂಡೆ. ಸಾಕ್ಷಿಯು ನಿಪಿ-6 ರಿಂದ 9 ನ್ನು ನೋಡಿ ಗುರುತಿಸಿರುತ್ತಾರೆ.

ಅದೇ ಸಂದರ್ಭದಲ್ಲಿ ಚಾಸಾ-12 ರವರ ಹೇಳಿಕೆಯನ್ನು ಪಡೆದುಕೊಂಡೆ. ನಂತರ ಮರಳಿ ಬಂದು ನನ್ನ ತನಿಖಾ ದಾಖಲೆಗಳನ್ನು ಚಾಸಾ-20 ರವರಿಗೆ ನೀಡಿದೆ. ಆರೋಪಿತರ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದೆ ಆದರೆ ಅವರು ಇರುವಿಕೆಯ ಬಗ್ಗೆ ಯಾವುದೇ ಮಾಹಿತಿ ಸಿಗಲಿಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ನಾನು ಚಾಸಾ-15 ಮತ್ತು 16 ರವರಿಗೆ ನೋಟೀಸು ನೀಡಿದ್ದೆ. ದಿಃ 15-10-2020 ರಂದು ಚಾಸಾ-15 ಮತ್ತು 16 ರವರಿಗೆ ನೋಟೀಸು ನೀಡಿದ್ದೆ, ಅವರಿಗೆ ಬೆಳಿಗ್ಗೆ 11-30 ರಿಂದ 12-30 ರ ಅವಧಿಯಲ್ಲಿ ಸ್ಥಳದಲ್ಲಿ ಇರುವಂತೆ ಸೂಚಿಸಿದ್ದೆ. ನೋಟೀಸಿನಲ್ಲಿ ಸಮಯ ನಮೂದಿಸಿರಲಿಲ್ಲ. ಪಂಚನಾಮೆ ಜರುಗಿಸಿದ ಸ್ಥಳದ ಮನೆ ಸಂಖ್ಯೆ ಮತ್ತು ಅದು ಯಾರ ಹೆಸರಿಗೆ ಇದೆ ಎಂದು ನಿಪಿ-5 ರಲ್ಲಿ ಬರೆದಿಲ್ಲ, ಆದರೆ ಚಾಸಾ-12 ರವರ ಹೇಳಿಕೆಯಲ್ಲಿ ನಮೂದಿಸಿದೆ. ಕಚ್ಚಾ ನಕ್ಷೆಗೆ ಪಂಚರ ಸಹಿ ಪಡೆದಿಲ್ಲ. ಚಾಸಾ-1 ರವರು ಸ್ಥಳದಲ್ಲಿಯೇ ಈ ಮೊದಲು ಇದಿದ್ದರಿಂದ ಅವರಿಗೆ ನೋಟೀಸು ನೀಡಿರಲಿಲ್ಲ. ನಮ್ಮ ಸಿಬ್ಬಂದಿ ಅಂಬರೇಶ ಎನ್ನುವವರ ಸಹಾಯದಿಂದ ಮೊಬೈಲ್‌ನಲ್ಲಿ ಪೋಟೋಗಳನ್ನು ತೆಗೆದಿದ್ದೇನೆ. ಅಂಬರೇಶರವರ ಹೇಳಿಕೆ ಪಡೆದಿಲ್ಲ. ಆದರೆ ಅವರ ಸಹಿಯನ್ನು ಪಂಚನಾಮೆಗೆ ಪಡೆದಿದ್ದೇನೆ. ಚಾಸಾ-12 ರವರ ಹೇಳಿಕೆಯಲ್ಲಿ ಮನೆ ಸಂಖ್ಯೆ ಹೇಳಿಲ್ಲ ಎಂದರೆ ಸರಿ. ಆ ದಿನ ನಾವು ಬಸ್‌ನಲ್ಲಿ ಹೋಗಿದ್ದೆನು, ನನ್ನ ಜೊತೆಗೆ ಒಬ್ಬ ಮಹಿಳಾ ಪೇದೆ ಇದ್ದರು. ನಾನು ಸ್ಥಳಕ್ಕೆ ಹೋಗಿಲ್ಲ, ಯಾವುದೇ ಪಂಚನಾಮೆ ಜರುಗಿಸಿಲ್ಲ, ಕಚ್ಚಾ ನಕ್ಷೆಯನ್ನು ತಯಾರಿಸಿಲ್ಲ ಮತ್ತು ಪೋಟೋ ತೆಗೆದಿಲ್ಲ ಎಂದರೆ ಸರಿ ಅಲ್ಲ. ಚಾಸಾ-1 ರವರ ಮಾತುಕೇಳಿ ಠಾಣೆಯಲ್ಲಿಯೇ ಕುಳಿತು ಪಂಚನಾಮೆ ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.